ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

13

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 2/7/2020

# ಆಗಸ್ಟಲ್ಲಿ ಕೊರೋನಾ ತಾರಕಕ್ಕೆ: ಡಾ|ಸುದರ್ಶನ್ ಬಲ್ಲಾಳ್

# ಬೆಂಗ್ಳೂರಲ್ಲಿ 40000 ಕೇಸ್!

## ವೈರಸ್ ಬಂದರೆ ಜೀವನ ಅಂತ್ಯವಲ್ಲ | ಯಾರೂ ಹೆದರಬೇಕಿಲ್ಲ | ಆದರೆ ಮುಂಜಾಗ್ರತೆ ವಹಿಸಿ ಕೋವಿಡ್ ಲಕ್ಷಣ ಇರುವವರು ಆಸ್ಪತ್ರೆಗೇ ಹೋಗಬೇಕಿಲ್ಲ | ಮನೆಯಲ್ಲೇ ಚಿಕಿತ್ಸೆ ನೀಡಬಹುದು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂದಿನ ಒಂದೂವರೆ ತಿಂಗಳಲ್ಲಿ 40 ಸಾವಿರ ಕೋವಿಡ್ ಪಾಸಿಟಿವ್ ಪ್ರಕರಣಗಳು ಬೆಂಗಳೂರಿನಲ್ಲಿ ಬೆಳಕಿಗೆ ಬರುವ ಸಾಧ್ಯತೆ ಇದೆ ಎಂದು ಮಣಿಪಾಲ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುದರ್ಶನ್ ಬಲ್ಲಾಳ್ ಹೇಳಿದ್ದಾರೆ.

ಕೋವಿಡ್ ಲಕ್ಷಣ ಇರುವವರು ಆಸ್ಪತ್ರೆಗೆ ತೆರಳುವ ಅಗತ್ಯ ಇಲ್ಲ. ಮನೆಯಲ್ಲಿಯೇ ಅವರನ್ನು ನೋಡಿಕೊಂಡು ಚಿಕಿತ್ಸೆ ನೀಡಬಹುದು. ಎಗ ಬಿ ಮತ್ತು ಸಿ ಲಕ್ಷಣ (ಮಧ್ಯಮ ಮತ್ತು ತೀವ್ರ ರೋಗ ಲಕ್ಷಣ) ಇರುವವರಿಗೆ ಆಸ್ಪತ್ರೆಯಲ್ಲಿ



ಹಾಸಿಗೆಗಳು ಲಭ್ಯವಾಗಲಿವೆ. ಮಾಧ್ಯಮಗಳು ಜನರನ್ನು ಹೆದರಿಸುವ ಕೆಲಸ ಮಾಡಬಾರದು. ಕೋವಿಡ್ ಬಂದರೆ ಜೀವನ ಅಂತಿಮವಲ್ಲ. ರೋಗ ಲಕ್ಷಣ ಇಲ್ಲದವರು ಆಸ್ಪತ್ರೆಗೆ ಬಂದು ದಾಖಲಾಗುವ ಅಗತ್ಯ ಇಲ್ಲ. ಅವರಿಗೆ ಹೋಂ ಐಸೋಲೇಷನ್ ಮೂಲಕವೇ ವಾಸಿ ಮಾಡಬಹುದು ಎಂದು ಜನತೆಗೆ ಆತ್ಮಸ್ಥೈರ್ಯ ತುಂಬಿದರು.

ಕೋವಿಡ್ ಬಂದ ಮಾತ್ರಕ್ಕೆ ಜೀವ ಅಂತ್ಯವಾಗುವುದಿಲ್ಲ. ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡರೆ ಕೊರೋನಾದಿಂದ ದೂರ ಇರಬಹುದು. ಆದರೆ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದನ್ನು ಗಮನಿಸಿದರೆ ಮುಂದಿನ ಒಂದೂವರೆ ತಿಂಗಳಲ್ಲಿ 40 ಸಾವಿರ ಕೋವಿಡ್ ಪಾಸಿಟಿವ್ ಪ್ರಕರಣಗಳು ಪತ್ತೆಯಾಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.